# ಹಿರಿಯ ಸಿವಿಲ್ ನ್ಯಾಯಾಧೀಶರು ಹಾಗೂ ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳವರ ನ್ಯಾಯಾಲಯ, ನಾಗಮಂಗಲ.

**CC. 108/2016 CW.1 P.W.1**

ಹೆಸರು : ಆರ್.ಸಿದ್ದರಾಜು

ತಂದೆ -ಹೆಸರು : ರಾಚೇಗೌಡ

ವಯಸ್ಸು : ೩೭

ವೃತ್ತಿ : ಪಿ ಎಸ್ ಐ

ವಾಸ ಸ್ಥಳ : ಮದ್ದೂರು.

**ಸಾಕ್ಷಿಯು ಪ್ರಮಾಣ ಮಾಡಿದ ದಿನಾಂಕ : ೧೬/೦೮/೨೦೨೨.**

**ಮುಖ್ಯವಿಚಾರಣೆಃ- ಸ.ಸ.ಅ ರವರಿಂದಃ-**

೧. ನಾನು ಸೆಪ್ಟಂಬರ್-೨೦೧೩ ರಿಂದ ಮೇ-೨೦೧೬ ನಾಗಮಂಗಲ ಟೌನ್ ಪಿ. ಎಸ್.ಐ ಎಂದು ಕರ್ತವ್ಯ ನಿರ್ವಹಿಸುತ್ತಿದ್ದೇನೆ.

ದಿನಾಂಕಃ ೧೮-೦೭-೨೦೧೪ ರಾತ್ರಿ ೯ಃ೧೦ ಗಂಟೆ ನಾನು, ಚಾ.ಸಾ-೨ ರಿಂದ ೪ ರವರು ಮರಿಯಪ್ಪ ವೃತ್ತ ಬಳಿ ಗಸ್ತಿನಲ್ಲಿ ಇದ್ದಾಗ ಬಾತಮಿದಾರಿರಿಂದ ಬಿಂಡಿಗನವಿಲೆ ರಸ್ತೆಯಲ್ಲಿ ಇರುವ ರೋಹಿತ್ ಮೊಬೈಲ್ ಅಂಗಡಿಯಲ್ಲಿ ದೀಪಕ್ ತನ್ನ ಕಂಪ್ಯೂಟರ್ ಉಪಕರಣಗಳನ್ನು ಬಳಸಿಕೊಂಡು ಸಾರ್ವಜನಿಕರಿಗೆ ಲೈಂಗಿಕ ಅಶ್ಲೀಲ್ ದೃಶ್ಯಗಳನ್ನು ತೋರಿಸಿ ಅವರಲ್ಲಿ ಆಸಕ್ತಿ ಬರುವಂತೆ ಮಾಡಿ ಅವರ ಮೊಬೈಲ್ ಗೆ ಅಪಲೋಡ್ ಮಾಡುತ್ತಿದ್ದಾನೆ ಎಂದು ಬಂದ ಮಾಹಿತಿ ಮೇರೆಗೆ ಸ್ಥಳದಲ್ಲಿ ಇದ್ದ ಪಂಚರಾದ ಚಾ.ಸಾ-೫ ಮತ್ತು ೭ ರವರನ್ನು ಕರೆದುಕೊಂಡು ಸರ್ಕಾರಿ ಜೀಪ್ ಸಂಖ್ಯೆಃ ಕೆಎ-೧೧-ಜಿ-೨೪೮ ರಲ್ಲಿ ರಾತ್ರಿ ೯ಃ೨೦ ಗಂಟೆಗೆ ಆರೋಪಿಯ ಮೊಬೈಲ್ ಅಂಗಡಿಯ ಬಳಿ ಹೋಗಿ ನೋಡಲಾಗಿ ದೃಶ್ಯ ನೋಡುತ್ತಿದ್ದ ಗಿರಾಕಿಗುಳ ಓಡಿ ಹೋದರು. ಅಂಗಡಿಯಲ್ಲಿ ಇದ್ದ ಆತನ ಹೆಸರು ಕೇಳಲಾಗಿ ಆರೋಪಿ ತನ್ನ ಹೆಸರು ವಿಳಾಸ ತಿಳಿಸಿದ. ಪಕ್ಕದಲ್ಲೇ ಇದ್ದ ಕಂಪ್ಯೂಟರ್

ಪರದೇ ನೋಡಲಾಗಿ ಹೆಂಗಸು ಮತ್ತು ಗಂಡಸು ಬೆತ್ತಲಾಗಿರುವ ಲೈಂಗಿಕ ಅಶ್ಲೀಲ ಚಿತ್ರಗಳು ಕಂಡು ಬಂದವು.

೩. ನಂತರ ಪಂಚರ ಸಮಕ್ಷಮ ಚಾ.ಸಾ.೫ ಮತ್ತು ೬ ರವರ ಸಮಕ್ಷಮ ರಾತ್ರಿ ೯:೩೦ ರಿಂದ ೧೦:೧೫ ರವರೆಗೆ ಮಹಜರ್ ಕ್ರಮ ಜರುಗಿಸಿ, ಸ್ಥಳದಲ್ಲಿ ಎ.ಸಿ.ಇ.ಆರ್ ಕಂಪನಿಯ ಒಂದು ಮೊನೀಟರ್, ಒಂದು ಕಪ್ಪು ಬಣ್ಣದ ಹಾರ್ಡ್ ಡಿಸ್ಕ ವಶಪಡಿಸಿಕೊಂಡು ಮಹಜರ್ ಕ್ರಮ ಜರುಗಿಸಿರುತ್ತೇನೆ. ಮಹಜರ್ ನ್ನು ನಿಪಿ.೧ ಎಂದು ಸಾಕ್ಷಿಯು ಸಹಿಯನ್ನು ನಿಪಿ.೧ (ಎ) ಎಂದು ಗುರುತಿಸಲಾಯಿತು. ಆಸಾಮಿ ಆರೋಪಿಯನ್ನು ದಸ್ತಗಿರಿ ಮಾಡಿ ಆರೋಪಿ ಮತ್ತು ಮಾಲು ಸಮೇತ ಠಾಣೆಗೆ ವಾಪಸ್ಸು ಬಂದು ಸ್ವ-ವರದಿಯನ್ನು ತಯಾರಿಸಿ ಮುಂದಿನ ಕ್ರಮಕ್ಕೆ ಚಾ.ಸಾ-೧೧ ರವರಿಗೆ ವಹಿಸಿಕೊಟ್ಟಿರುತ್ತೇನೆ. ಸ್ವ-ವರದಿಯನ್ನು ನಿಪಿ.೨ ಎಂದು ಸಾಕ್ಷಿಯ ಸಹಿಯನ್ನು ನಿಪಿ.೨ (ಎ) ಎಂದು ಗುರುತಿಸಲಾಯಿತು. ಅದೇ ದಿನ ಆರೋಪಿಗೆ ಕಲಂ.೪೧ ಸಿಆರ್.ಪಿ.ಸಿ ಅಡಿ ನೋಟೀಸ್ ಜಾರಿ ಮಾಡಿರುತ್ತೇನೆ. ನೋಟೀಸನ್ನು ನ್ನು ನಿಪಿ.೩ ಎಂದು ಸಾಕ್ಷಿಯು ಸಹಿಯನ್ನು ನಿಪಿ.೩ (ಎ) ಎಂದು ಗುರುತಿಸಲಾಯಿತು. ಮುಂದಿನ ತನಿಖೆಗಾಗಿ ಚಾ.ಸಾ-೧೨ ರವರಿಗೆ ವಹಿಸಿಕೊಟ್ಟಿರುತ್ತೇನೆ. ಸಾಕ್ಷಿಯು ಆರೋಪಿಯನ್ನು ನೋಡಿ ಗುರುತಿಸುತ್ತಾರೆ.

( ಈ ಹಂತದಲ್ಲಿ ಆರೋಪಿಪತರ ವಕೀಲರು ಪಾಟೀ ಸವಾಲಿಗೆ ಸಮಯಾವಕಾಶ ಕೋರಿದ್ದರಿಂದ ಪಾಟೀ ಸವಾಲಿಗೆ ಸಮಯ ನೀಡಲಾಯಿತು).

**ಮರುವಿಚಾರಣೆ:** ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ಬೆರಳಚ್ಚು ಮಾಡಿಸಲಾಯಿತು.)

ಓದಿ ಹೇಳಿ ಕೇಳಿ ಸರಿ ಇದೆ

ಹಿರಿಯ ಸಿವಿಲ್ ಮತ್ತು ಜೆಎಂಎಫ್ ಸಿ ನ್ಯಾಯಾಲಯ
ನಾಗಮಂಗಲ.

ಸಾಕ್ಷಿದಾರರ ಸಹಿ: